


ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ ರಚಿಸಿರುವ 'ಕರ್ನಾಟಕದಲ್ಲಿ ಮಹಿಳೆಯರ ವಿರುದ್ಧ ಹಿಂಸೆ ತಡೆಗೆ ಸಹಾಯಕ ಸೇವೆಗಳು' ಕುರಿತ ಪುಸ್ತಕವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ತೆರೇಸಾ ಭಟ್ಟಾಚಾರ್ಯ ಬೆಂಗಳೂರಿನಲ್ಲಿ ಬುಧವಾರ ಬಿಡುಗಡೆ ಮಾಡಿದರು. ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ರೊದ್ದಂ ನರಸಿಂಹ, ಲಿಂಗಾಧಾರಿತ ಅಧ್ಯಯನ ವಿಭಾಗದ ಆಶಾ ರಮೇಶ್ ಉಪಸ್ಥಿತರಿದ್ದರು.

# ಮಹಿಳಾ ಹಕ್ಕುಗಳ ಬಗ್ಗೆ ಜಾಗೃತಿ: ಸ್ವಯಂ ಸಂಸ್ಥೆಗಳ ಕರ್ತವ್ಯ

ಬೆಂಗಳೂರು, ಫೆ. 20: ಗ್ರಾಮೀಣ ಪ್ರದೇಶಗಳಲ್ಲಿರುವ ಮಹಿಳೆಯರಿಗೆ ಅವರ ಹಕ್ಕುಗಳ ಕುರಿತು ಅರಿವು ಮೂಡಿಸಿ ಅವರು ಶೋಷಣೆಯನ್ನು ಪ್ರತಿಭಟಿಸುವ ಧೈರ್ಯ ತೋರಿಸುವಂತೆ ಮಾಡುವ ಜವಾಬ್ದಾರಿ ಮಹಿಳಾ ಸಂಘಟನೆಗಳದ್ದಾಗಿದೆ ಎಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಥೆರೆಸಾ ಭಟ್ಟಾಚಾರ್ಯ ಅಭಿಪ್ರಾಯ ಪಟ್ಟಿದ್ದಾರೆ.

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ ನಗರದಲ್ಲಿ ಇಂದು ಸಂಘಟಿಸಿದ್ದ ಕಾರ್ಯಕ್ರಮದಲ್ಲಿ 'ಮಹಿಳೆಯ ಮೇಲಿನ ದೌರ್ಜನ್ಯವನ್ನು ಎದುರಿಸಲು ಸಹಕರಿಸುವ ಸೇವೆಗಳ ಕೈಪಿಡಿ' ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ದೌರ್ಜನ್ಯವನ್ನು ಎದುರಿಸುವ ಜಾಗೃತಿಯನ್ನು ಮೂಡಿಸುವಂತೆಯೇ ದೌರ್ಜನ್ಯಕ್ಕೆ ಒಳಗಾಗಿ ನೆರವು ಪಡೆಯಲು ಬರುವವರಿಗೆ ಸೂಕ್ತ ಸಾಂತ್ವನ ನೀಡುವ ವ್ಯವಸ್ಥೆಯೂ ಇರಬೇಕು. ಬಹಳಷ್ಟು ಪ್ರಕರಣಗಳಲ್ಲಿ ದೌರ್ಜನ್ಯಕ್ಕೊಳಗಾದ ಮಹಿಳೆಯರು ಪೊಲೀಸರನ್ನು ಸಂಪರ್ಕಿಸುವುದಿಲ್ಲ. ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕಾದ ಜವಾಬ್ದಾರಿ ಸಂಘಟನೆಗಳದ್ದು ಎಂದು ಅವರು ಹೇಳಿದರು.

ಮಾಧ್ಯಮಗಳು ಮಹಿಳೆಯರ ಮೇಲಿನ ದೌರ್ಜನ್ಯಗಳು ನಡೆಯದಂತೆ ಹಾಗೂ ಅವುಗಳ ವಿರುದ್ಧ ಮಹಿಳೆ ಪ್ರತಿಭಟಿಸಲು ಸಹಕಾರಿಯಾಗಿರುವ ಮಾಹಿತಿಗಳನ್ನು ಆಕೆಗೆ ತಲುಪಿಸಲು ಸಹಕರಿಸಬೇಕು ಎಂದು ಅವರು ಹೇಳಿದರು.

ಕೈಪಿಡಿಯನ್ನು ನಿಯಾಸ್‌ನ ಲಿಂಗಾಧಾರಿತ ಅಧ್ಯಯನಗಳ ಘಟಕವು ವಿಶ್ವಸಂಸ್ಥೆಯ ಮಹಿಳಾ ಅಭಿವೃದ್ಧಿ ನಿಧಿಯ ಸಹಯೋಗದಲ್ಲಿ ರೂಪಿಸಿದೆ. ಇದರಲ್ಲಿ ರಾಜ್ಯದ 13 ಜಿಲ್ಲೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಯಲು ಸಹಕರಿಸುವ ಸರಕಾರೇತರ ಸಂಘಟನೆಗಳು ಮತ್ತು ಸರ್ಕಾರೀ ವ್ಯವಸ್ಥೆಯ ಸಂಪೂರ್ಣ ವಿವರಗಳನ್ನು ಒಳಗೊಂಡಿದೆ.

ಸಮಾರಂಭದ ಅಧ್ಯಕ್ಷತೆಯನ್ನು ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ನಿರ್ದೇಶಕ ರೊದ್ದ ನರಸಿಂಹ ವಹಿಸಿದ್ದರು. ಲಿಂಗಾಧಾರಿತ ಅಧ್ಯಯನ ವಿಭಾಗದ ಆಶಾ ರಮೇಶ್ ಉಪಸ್ಥಿತರಿದ್ದರು.